ಒಂದು ಪತ್ರಿಕೆಯವರು ಬಹುಶಃ ನಾಡಿಗನಿಗೆ ರಿವ್ಯೂ ಮಾಡಲು ಕಳಿಸಿದ್ದರು. ಅದನ್ನು ಓದಿದ ನಾಡಿಗ, ಅಲ್ಲಿ ರಿವ್ಯೂ ಕಳಿಸುವ ಮೊದಲೇ ನನ್ನ ಕವಿತೆಗಳ ಬಗ್ಗೆ ತನ್ನ ಸಂತೋಷ ವ್ಯಕ್ತಪಡಿಸಿ ಬರೆದ ಪತ್ರ ನನ್ನ ಉತ್ಸಾಹ ಹೆಚ್ಚಿಸಿತ್ತು. ನನ್ನ ಅಮೂಲ್ಯ ಆಸ್ತಿಯಂತಿರುವ ಆ ಪತ್ರದಲ್ಲಿ, ತಾನು 'ಪ್ರಜಾಮತ' ವಾರಪತ್ರಿಕೆಗೆ 'ನೀನಾ' ಬಗ್ಗೆ ಬರೆಯುತ್ತಿದ್ದು, ಪಿ. ಶ್ರೀನಿವಾಸರಾವ್ ಸಹ ಅದನ್ನು ಓದಿದ್ದಾರೆ, 'ಈ ಪಟ್ಟಣಶೆಟ್ಟಿ ಮಹತ್ವದ ಕವಿ, ನೀನು ಕಾಳಜಿಯಿಂದ ಓದು' ಎಂದು ಸೂಚಿಸಿದ್ದಾರೆ, ಎಂದು ಬರೆದು ಕೊನೆಯಲ್ಲಿ, 'ಇಷ್ಟು ಮಾತ್ರ ನಿಜ, ನಿಮ್ಮಲ್ಲಿ ಅಸಾಧಾರಣವಾದದ್ದು ಏನೋ ಇದೆ' ಎಂದು ಬರೆದಿದ್ದ. ಅದರ ಮರುವಾರವೇ 'ಪ್ರಜಾಮತ'ದಲ್ಲಿ ನಾಡಿಗ ಬರೆದ ರಿವ್ಯೂ ಪ್ರಕಟವಾಯಿತು. ಆ ನಿಷ್ಪಕ್ಷ ಬರಹದಲ್ಲಿ ನನ್ನ ಕಾವ್ಯದ ದೋಷಗಳನ್ನೂ ಚರ್ಚಿಸಿದ್ದ.

* * *

ಈ ಮಧ್ಯೆ ನಾನು, ಚಂಪಾ, ಗಿರಡ್ಡಿ ಕೂಡಿ 'ಸಂಕ್ರಮಣ' ಹೆಸರಿನ ದ್ವೈಮಾಸಿಕ ಸಾಹಿತ್ಯ ಸಂಕಲನ ಪ್ರಕಟಿಸಲು ನಿರ್ಧರಿಸಿದೆವು. ಕನ್ನಡದಲ್ಲಿ ಅಡಿಗರ 'ಸಾಕ್ಷಿ', ಪೂಚಂತೇ ಮಿತ್ರರ 'ಲಹರಿ', ಘನಶ್ಯಾಮ-ಬಾಕಿನ ಬಳಗದ 'ಕವಿತಾ' ಎಂಬ ಸಾಹಿತ್ಯಕ್ಕೆ ಬದ್ಧವಾದ ಪತ್ರಿಕೆ ಬರುತ್ತಿದ್ದವು. ಅವೆಲ್ಲವೂ ಅನಿಯತಕಾಲಿಕಗಳೇ ಆಗಿದ್ದುವು. ನಾವು ಈ ಸೂತ್ರವನ್ನು ನಿಯತಕಾಲಿಕಕ್ಕೆ ಬದಲಿಸಲು, ಮತ್ತು ನಮ್ಮ ಲೇಖಕರ ಬಳಗವನ್ನು ಸಮಗ್ರ ಕರ್ನಾಟಕದ ವ್ಯಾಪ್ತಿಗೆ ತರಲು ನಿರ್ಧರಿಸಿದ್ದೆವು. ನಮ್ಮ ಪತ್ರಿಕೆಗೆ ಪ್ರಚಾರ, ಪ್ರಸಿದ್ಧಿ ಸಿಗುವಂತೆ ಯಾರಾದರೂ ಪ್ರತಿಷ್ಠಿತ ಲೇಖಕರನ್ನು ಕರೆಸಿ, ಅದನ್ನು 1964ರ ಆಗಸ್ಟ್ 15ರಂದು ಬಿಡುಗಡಿಸಲು ನಿರ್ಧರಿಸಿದೆವು. ಬಿಡುಗಡೆಗೆ ನಾಡಿಗನನ್ನು ಕರೆಸುವ ನನ್ನ ಸಲಹೆಯನ್ನು ಮಿತ್ರರು ಒಪ್ಪಿದರು. ಕೂಡಲೇ ನಾಡಿಗನಿಗೆ ಪತ್ರ ಬರೆದೆ. ಈ ಅವಧಿಯಲ್ಲಿ ನಮ್ಮಿಬ್ಬರ ನಡುವೆ ನಡೆದ ಪತ್ರವ್ಯವಹಾರ ನಮ್ಮನ್ನು ಹತ್ತಿರ ತಂದಿತ್ತು. ಹೊಸ ಪೀಳಿಗೆಯ ಹೆಸರಾಂತ ಕವಿ, ವಿಮರ್ಶಕ, ಒಳ್ಳೆಯ ವಾಗ್ಮಿ, ಇಂಗ್ಲಿಷ್ ಕಲಿಸುತ್ತಿದ್ದರೂ ಕನ್ನಡ ಸಾಹಿತ್ಯ ತಿಳಿದಿದ್ದ ವಿರಳರಲ್ಲಿ ಮುಖ್ಯನಾದವನು, ಎಂದು ನಾಡಿಗನ ಹೆಸರು ಖ್ಯಾತವಾಗಿತ್ತು. ಆದರೆ, ನಾವು ಯಾರೂ ಅವನನ್ನು ನೋಡಿರಲಿಲ್ಲ. ಮಡಗಾಂವದಿಂದ ಬರಲಿದ್ದ ನಾಡಿಗನನ್ನು ಚಂಪಾನ ರೂಮಿನಲ್ಲಿ ಉಳಿಸಲು ನಿರ್ಧರಿಸಿದ್ದೆವು. ಚಂಪಾ ಆಗ 'ಉದಯ ಹಾಸ್ಟೆಲ್'ದಲ್ಲಿ ವಾರ್ಡನ್ ಆಗಿದ್ದ. ನಾಡಿಗ 14ರಂದು ಶುಕ್ರವಾರ ಬೆಳಗ್ಗೆನೇ ಬಂದು ನಮ್ಮೊಡನೆ ಇರುವುದಾಗಿ ಹೇಳಿದ್ದ.

ಬಸ್‌ನಲ್ಲಿ ಬರುವ ಅವನನ್ನು ಗುರುತಿಸುವುದು ಹೇಗೆ? ನನ್ನ ಪತ್ರಕ್ಕೆ ನಾಡಿಗ ಬರೆದ: 'ಯಾರ ತಲೆಯ ಮೇಲೆ ಸಂಪೂರ್ಣ ಬಿಳಿಕೂದಲು ಇರುತ್ತವೋ, ಒಂದೂ ಕಪ್ಪು ಕೂದಲು ಇರುವುದಿಲ್ಲವೋ ಆತನೇ ನಾಡಿಗ ಎಂದು ತಿಳಿ' ಎಂದು ಬರೆದ. ನನಗೆ ಮೋಜೆನಿಸಿತು. ಇಷ್ಟು ಬೇಗ ಕೂದಲು ಬೆಳ್ಳಗಾಗಿವೆಯೆ? ಅಥವಾ ಕೂದಲು ಬೆಳ್ಳಗಿರುವಷ್ಟು ಇವರಿಗೆ ವಯಸ್ಸಾಗಿದೆಯೆ? ಇದನ್ನೆಲ್ಲ ಹೇಗೆ ಕೇಳುವುದು, ಗೊಂದಲದಲ್ಲಿದ್ದೆ. ಆ ದಿನ ಬೆಳಗ್ಗೆನೇ ಹೋಗಿ ಗೋವೆಯಿಂದ ಬರುವ ಬಸ್‌ಗಾಗಿ ಕಾಯುತ್ತಿದ್ದೆ. ಬಸ್ ಬಂತು, ಜನ ಇಳಿಯತೊಡಗಿದರು. ಬಿಳಿ ಕೂದಲಿನ ಮುದುಕ ಇಳಿಯುವುದರ ಕಡೆಗೆ ಲಕ್ಷ್ಯ ವಹಿಸಿದ್ದೆ. ಬಗಲಿಗೆ ಒಂದು ಬ್ಯಾಗ್ ಹಾಕಿಕೊಂಡು ಇಳಿದ ಒಬ್ಬ ವ್ಯಕ್ತಿ, ಕುತೂಹಲ ತುಂಬಿದ ನನ್ನ ಮುಖ ನೋಡುತ್ತ, ನೇರವಾಗಿ ನನ್ನ ಹೆಗಲ ಮೇಲೆ ಕೈಯಿಟ್ಟ. ಗಾಬರಿಯಿಂದ ಹೊರಳಿ ನೋಡಿದರೆ ಬಿಳಿ ಕೂದಲಿನ ಯುವಕ! 'ಪಟ್ಟಣಶೆಟ್ಟಿ, ನಾನು ಸುಮತೀಂದ್ರ ನಾಡಿಗ. ಇವರ ಹೆಸರು ಕುಮಾರ, ನನ್ನ ಗೆಳೆಯ; ಇವರೂ ಕನ್ನಡದವರೇ; ನಮ್ಮ ಕಾಲೇಜಿನಲ್ಲಿ ಫಿಜಿಕ್ಸ್ ಲೆಕ್ಚರರ್' ಎನ್ನುತ್ತ ತನ್ನಷ್ಟೇ ವಯಸ್ಸಿನ ಒಬ್ಬರನ್ನು ಪರಿಚಯಿಸಿದ. ನನ್ನ ಅಚ್ಚರಿಗೆ ಮಿತಿಯಿರಲಿಲ್ಲ. ನನ್ನ ದಿಗಿಲನ್ನು ನೋಡುತ್ತ ನಾಡಿಗ ಮೋಜಿನಿಂದ 'ಹಾ ಹಾ ಹಾ' ಎಂದು ನಗತೊಡಗಿದ. ನಾಡಿಗನ ಖ್ಯಾತಿ, ವಿದ್ವತ್ತಿನ ಬಗ್ಗೆ ತಿಳಿದಿದ್ದ ಕುಮಾರ ಅವನ ಬ್ಯಾಗ್ ಇಸಗೊಂಡು ತಮ್ಮ ಕೈಯಲ್ಲಿ ಹಿಡಿದುಕೊಂಡರು. ಆ ಕಾಲದಲ್ಲಿ ಗೋವೆಯಲ್ಲಿ ನಾಡಿಗನನ್ನು ಬಿಟ್ಟರೆ ಬೇರೆ ಯಾರೂ ಕನ್ನಡಿಗರು ಇದ್ದಿರಲಿಕ್ಕಿಲ್ಲ ಎಂದೇ ತಿಳಿದಿದ್ದೆ. 'ನನ್ನ ತಲೆ ನೋಡತಾ ಇರೋದಾ...? ತಲೆಯ ಒಳಗಡೆ ಚಿನ್ನ ತುಂಬಿದೆ, ಹೊರಗಡೆ ಬೆಳ್ಳಿ ಮೆತ್ತಿದೆ' ಅನ್ನುತ್ತ ಮತ್ತೆ ನಗತೊಡಗಿದ. 'ನಾನು ಹುಟ್ಟಿದಾಗಿನಿಂದ ಈ ಕೂದಲು ಹೀಗೆಯೇ ಇವೆ. ಇಂಥ ಕೂದಲು ಪಡೆಯುವುದಕ್ಕೂ ಭಾಗ್ಯ ಇರಬೇಕು. ಯಾವ ಲೇಖಕನಿಗೂ ಇಂಥ ಬೆಳ್ಳಿ ಕೂದಲು ಇಲ್ಲ...' – ನಾಡಿಗನ ವಾಗ್ಝರಿ ಶುರುವಾಗಿತ್ತು. ಅವರನ್ನು ಒಂದು ಟಾಂಗಾದಲ್ಲಿ ಕೂರಿಸಿಕೊಂಡು,